



ರಸಿಕರ ಕಂಗಳ ಸೆಳೆಯುವಂತಿರುವ ಬಾದಾಮಿಯ ಭವ್ಯನೋಟ

> ಕೊರೊನಾ ಸಂದರ್ಭದ ನಷ್ಟವನ್ನು ಪ್ರವಾಸಿಗರಿಂದ ವಸೂಲಿ ಮಾಡಬೇಕು ಎನ್ನುವ ಮನಸ್ಥಿತಿಯಿಂದ ದೀರ್ಘಾವಧಿಯಲ್ಲಿ ಪ್ರವಾಸೋದ್ಯಮಕ್ಕೆ ಹೊಡೆತ ಬೀಳಲಿದೆ
>
> **–ವಿಕ್ರಂ ಉಡುಪ,** 'ಬರೇಕಲ್ ಫಾರ್ಮ್‌ಸ್ಟೇ' ಮಾಲೀಕ, ಕೊಡಚಾದ್ರಿ



ಎಂ. ರವಿ ಪ್ರವಾಸೋದ್ಯಮದ ಬಿಕ್ಕಟ್ಟುಗಳನ್ನು ಮುಂದಿಡುತ್ತಾರೆ.

ಬೆಂಗಳೂರಿನಿಂದಲೇ ಹೆಚ್ಚು ಪ್ರವಾಸಿಗರು ರಾಜ್ಯದ ಮೂಲೆ, ಮೂಲೆಗೆ ಹೋಗುತ್ತಾರೆ. ಬೆಂಗಳೂರು, ಕೊಡಗು, ಕಬಿನಿ, ನಾಗರಹೊಳೆ, ಸಕಲೇಶಪುರ, ಹಂಪಿ ಸೇರಿದಂತೆ ರಾಜಧಾನಿಯಿಂದ 300 ಕಿ.ಮೀ.ದಿಂದ 350 ಕಿ.ಮೀ. ವ್ಯಾಪ್ತಿಯಲ್ಲಿರುವ ಪ್ರದೇಶಗಳಿಗೆ ಪ್ರವಾಸಕ್ಕೆ ಹೋಗುವವರೇ ಹೆಚ್ಚು. ಬೆಂಗಳೂರಿನಲ್ಲಿ ಕರ್ಫ್ಯೂ, ಲಾಕ್‌ಡೌನ್‌ನಂತಹ ಆದೇಶಗಳು ಹೊರಬೀಳುತ್ತಿದ್ದಂತೆಯೇ, ಪ್ರವಾಸಿಗರ ಕನಸೂ ಕಮರತೊಡಗುತ್ತದೆ.

ಪ್ರವಾಸಕ್ಕೆ ತೆರಳಲು ಸಾರ್ವಜನಿಕರ ಉತ್ಸಾಹ ಹೆಚ್ಚುತ್ತಿದ್ದಂತೆ, ರಾಜ್ಯ ರಸ್ತೆ ಸಾರಿಗೆ ನಿಗಮವು ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಿಗೆ ಟೂರ್ ಪ್ಯಾಕೇಜ್ ಘೋಷಿಸಿ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಿತ್ತು. ಬೆಂಗಳೂರಿನಿಂದ ಹಲವು ತಾಣಗಳ ನಡುವೆ ಈ ವಿಶೇಷ ಬಸ್‌ಗಳು ಸೇವೆ ನೀಡುತ್ತಿದ್ದವು.

ಜೋಗ ಜಲಪಾತ, ಶಿರಸಿ ಹಾಗೂ ಚಿತ್ರದುರ್ಗದ ಐತಿಹಾಸಿಕ ಕಲ್ಲಿನಕೋಟೆ ಸೇರಿದಂತೆ ಹಲವು ಕಡೆಗಳಲ್ಲಿ ಕೆಎಸ್‌ಆರ್‌ಟಿಸಿಯು ಒಂದು ದಿನದ ಟೂರ್ ಪ್ಯಾಕೇಜ್ ರೂಪಿಸಿತ್ತು.

ಊಟ, ಪ್ರಯಾಣ, ಟಿಕೆಟ್, ಗೈಡ್ ಶುಲ್ಕ ಸೇರಿ ₹ 1 ಸಾವಿರ ನಿಗದಿ ಮಾಡಲಾಗಿತ್ತು. ಈ ವಿಶೇಷ ಪ್ಯಾಕೇಜ್ ಅಡಿ ಒಂದೇ ದಿನ ನಿಗಮಕ್ಕೆ ₹1 ಲಕ್ಷ ಆದಾಯ ಹರಿದು ಬಂದಿತ್ತು. ಆದರೆ, ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಒಮ್ಮೆಯೂ ಈ ಬಸ್ ಬರಲಿಲ್ಲ.

ಜೋಗ ಜಲಪಾತ ವೀಕ್ಷಣೆಗೆ ಬರುವವರಿಗೂ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ಕಡ್ಡಾಯ ಮಾಡಿರುವುದಕ್ಕೆ ವಿರೋಧವೂ ವ್ಯಕ್ತವಾಯಿತು. ಸದ್ಯ ವಾರಾಂತ್ಯ ಕರ್ಫ್ಯೂ ಜಾರಿಯಿಂದ ಪ್ಯಾಕೇಜ್ ಟೂರ್‌ಗಳನ್ನೆಲ್ಲ ರದ್ದು ಮಾಡಲಾಗಿದೆ. ಈ ಕ್ಷೇತ್ರವನ್ನೇ ನಂಬಿದವರ ಸಂಕಷ್ಟವೂ ಇದರೊಂದಿಗೆ ಮುಂದುವರಿದಿದೆ.

## ಸರ್ಕಾರದ ಬೆಂಬಲದ ನಿರೀಕ್ಷೆ

ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಒಂದೇ ನಿಯಮ ರೂಪಿಸುವುದರ ಜೊತೆಗೆ, ಪ್ರವಾಸೋದ್ಯಮ ಇಲಾಖೆ, ಅರಣ್ಯ ಇಲಾಖೆ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಡುವೆ ಸಮನ್ವಯ ಸಾಧಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕಾಗಿದೆ. ಎರಡೂ ಡೋಸ್ ಲಸಿಕೆ ಪಡೆದವರಿಗೆ ಯಾವುದೇ ಪರೀಕ್ಷಾ ವರದಿ ಕಡ್ಡಾಯ ಮಾಡದೆ, ಪ್ರವಾಸಿ ತಾಣಗಳ ಭೇಟಿಗೆ ಅವಕಾಶ ನೀಡಿದರೆ ಪ್ರವಾಸೋದ್ಯಮವು ಮತ್ತೆ ಗರಿಗೆದರಲಿದೆ. ಕನ್ನಡ 'ದೇಶ'ದ ವಿಶ್ವರೂಪದರ್ಶನಕ್ಕೆ ಜಗದ ಜನರೂ ಬಂದರೆ, ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳೂ ಚುರುಕುಗೊಳ್ಳಲಿವೆ.

ಮೈಮನಗಳಿಗೆ ಉಲ್ಲಾಸ ನೀಡುವ ಅದ್ಭುತ ಶಕ್ತಿ ಪ್ರವಾಸಕ್ಕಿದೆ. ಆ ಕಾರಣದಿಂದಲೇ ಕೆಲವರು ನಿಯಮಿತವಾಗಿ ಪ್ರವಾಸ ಮಾಡುವ ಅಭ್ಯಾಸ ರೂಢಿಸಿಕೊಂಡಿರುತ್ತಾರೆ. ವಿವಿಧ ಪ್ರದೇಶಗಳ ಭಾಷೆ–ಸಂಸ್ಕೃತಿಯನ್ನು ಅರಿಯುವ ಉದ್ದೇಶದಿಂದಲೂ ಪ್ರವಾಸಕ್ಕೆ ಮಹತ್ವವಿದೆ. ಆದರೆ, ಇದೆಲ್ಲಕ್ಕೂ ಕೊರೊನಾ ಬಿಕ್ಕಟ್ಟು ತಡೆಯೊಡ್ಡಿದೆ. ಆದರೆ, ಮನೆಯೊಳಗೆ ಎಷ್ಟು ಕಾಲ ಮುಖ ಮರೆಸಿಕೊಂಡಿರಬಹುದು. ಸಮಸ್ಯೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಮುನ್ನೆಚ್ಚರಿಕೆಗಳೊಂದಿಗೆ ಜೀವನ ಸಾಗಿಸುವುದು ಅನಿವಾರ್ಯ. ಈ ಅನಿವಾರ್ಯತೆ ಪ್ರವಾಸಕ್ಕೂ ಅನ್ವಯಿಸುವಂತಹದ್ದು. ಜನರೇನೋ ಮನೆಯಿಂದ ಹೊರಬಂದು ಊರು ಸುತ್ತಲು ಸಿದ್ಧರಿದ್ದಾರೆ. ಅವರಿಗೆ ಅಗತ್ಯವಾದ ಸವಲತ್ತುಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಜವಾಬ್ದಾರಿ.

ಪ್ರತಿಕ್ರಿಯಿಸಿ: feedback@sudha.co.in